ಬದುಕಿಗೆ ಸಂಬಂಧಿಸಿರುವುದಿಲ್ಲ (ಕೆಲವೊಮ್ಮೆ ಹೊಂದಿಕೆಯಾಗುವುದಿಲ್ಲ). ಸರ್ವನಾಮಗಳನ್ನ, ಕ್ರಿಯಾಪದಗಳನ್ನ ಅಥವಾ ವಸ್ತುಗಳನ್ನ ಬಳಸುವ ವಿಚಾರದಲ್ಲಿ ಪರ್ಷಿಯನ್ ಭಾಷೆಗೆ ನಿರ್ದಿಷ್ಟ ಲಿಂಗವಿಲ್ಲ. ಎಲ್ಲಾ ಲಿಂಗ ಆಧಾರಿತ ಶಬ್ದಗಳು ಒಂದೋ ಅರೇಬಿಕ್ ಭಾಷೆಯಿಂದ ಇಲ್ಲವೇ ನಿರ್ದಿಷ್ಟ ವರ್ಗದ ಪ್ರಭಾವಿ ಭಾಷೆಯಿಂದ ಸ್ವೀಕಾರಗೊಂಡಿವೆ. ಮಹಿಳೆಯಾಗಿ ನಾನು ಭಾಷೆಯನ್ನು ಫೆಮಿನೈಸ್ ಮಾಡಲು ಪ್ರಯತ್ನಿಸುತ್ತೇನೆ ಮತ್ತು ಅದಕ್ಕೆ ಸ್ತ್ರೀ ಗುಣ ಮತ್ತು ಸ್ತ್ರೀ ದನಿ ಮತ್ತು ಒಟ್ಟಾರೆ ಸ್ತ್ರೀ ವ್ಯಕ್ತಿತ್ವವನ್ನು ಸೇರಿಸುತ್ತೇನೆ. ನನ್ನ ಬಹುತೇಕ ಪದ್ಯಗಳ ಸ್ಪೀಕರ್ ಹೆಣ್ಣಾಗಿದ್ದಾಳೆ ಮತ್ತು ಆಕೆಯ ದಿನಬಳಕೆಯ ವಸ್ತು ಪ್ರಪಂಚವನ್ನು ನನ್ನ ಸಾಹಿತ್ಯದ ಒಳಗಿಳಿಸಲು ಪ್ರಯತ್ನಿಸಿದ್ದೇನೆ.

'ದ ಏಂಜೆಲ್ಸ್ ಆಫ್ ದ ಫ್ರೇಮ್'ನಂತಹ ನನ್ನ ಬಹಳಷ್ಟು ಪದ್ಯಗಳಲ್ಲಿ ತುಂಬಾ ಹಳೆಯ ಮಾದರಿ ಅಥವಾ ಆಲೋಚನೆಗಳನ್ನ ನವೀಕರಿಸಲು ಯತ್ನಿಸಿರುವೆ. ಇಲ್ಲಿ ಸಾಂಪ್ರದಾಯಿಕ ಚೌಪದಿಯ ಶೈಲಿಯನ್ನ ಮರು ಸೃಷ್ಟಿಸಿ, ಸಾವು ಮತ್ತು ಬದುಕಿನ ಕುರಿತು ಅವೇ ಪ್ರಶ್ನೆಗಳನ್ನ ನಾನು ಕೇಳುತ್ತಿದ್ದೇನೆ. ನನ್ನ ಮಿಸ್ಟಿಕ್ ಪದ್ಯಗಳಲ್ಲಿನ ಸನ್ನಿವೇಶ ಸ್ವಲ್ಪ ಹೊಸದೇ ಆದರೂ ಆಲೋಚನೆ ಪರ್ಷಿಯನ್ ಕ್ಲಾಸಿಕ್ಸ್‌ಗಳಲ್ಲಿ ತೀರಾ ಸಾಮಾನ್ಯ ಸಂಗತಿಯಾದ ವಿಶ್ವಾತ್ಮಕ ಏಕತೆಯೇ ಪ್ರಧಾನ ಸೂತ್ರವಾಗಿದೆ. ಬಹುಶಃ ಆ ಆಲೋಚನೆಗೆ ನಾನು ಹೊಸ ಜಾಗ ಮತ್ತು ಸಮಯವನ್ನು ಕೊಟ್ಟು ನನ್ನ ದೈನಂದಿನ ಸೆಟ್ಟಿಂಗ್‌ನೊಂದಿಗೆ ನವೀಕರಿಸಿದ್ದೇನೆ.

◆ **1997 ರಲ್ಲಿ ಪ್ರಕಟವಾದ ನಿಮ್ಮ ಮೊದಲ ಕವನಸಂಕಲನ– This dead body is not An apple; it's either a cucumber or A pear– ಕೃತಿಯನ್ನು ಇರಾನಿ ಕಾವ್ಯದ ಉದಯೋನ್ಮುಖ ಪ್ರಭಾವಿ ಧ್ವನಿಯೆಂದು ಗುರುತಿಸಲಾಗಿದೆ. ಆಗ ನಿಮ್ಮ ಮನಸ್ಥಿತಿ ಹೇಗಿತ್ತು?**

ವಿಮರ್ಶಕರು ನನ್ನ ಪದ್ಯಗಳನ್ನು ಪರಿಕಲ್ಪನಾತ್ಮಕ ಕಲೆಗೆ (Conceptual Art) ಹೋಲಿಸಿದ್ದಾರೆ. ಅದು ಪರ್ಷಿಯನ್ ಕಾವ್ಯಕ್ಕೆ ಹೊಚ್ಚಹೊಸದು. ಆದರೆ ವಸ್ತು ವಿಷಯಗಳನ್ನು ಕಲಸಿ ಇರಿಸುವ ಮತ್ತು ಅವುಗಳನ್ನು ಸರ್ರಿಯಲ್ ಆಗಿ ಹೆಸರಿಸುವ ಯಾದೃಚ್ಛಿಕ ಪದಗಳ ಐಡಿಯಾ ಅನಿಶ್ಚಿತ ಸಂದಿಗ್ಧತೆಯನ್ನು ಸೃಷ್ಟಿಸಿತು. ಅದು ಬದಲಾವಣೆಯ ಹರಿವಿನಲ್ಲಿರುವ ಎಲ್ಲವನ್ನು ವಿವರಿಸುತ್ತದೆ. ಅದು ಅನಿಶ್ಚಿತ ಅಸ್ಥಿರ ಸಂವಹನದ ಭಾಷೆಯನ್ನು ಸೃಷ್ಟಿಸಿತು. ಆ ಸಮಯದಲ್ಲಿ ನಾನು ಫಾರ್ಮಾಲಿಸಮ್ ಮತ್ತು ರೋಮನ್ ಯಾಕೊಬಸನ್‌ನ ಸಿದ್ಧಾಂತಗಳನ್ನ ಅಗಾಧವಾಗಿ ಒಳಗಿಳಿಸಿಕೊಂಡಿದ್ದೆ. ಮತ್ತು ಆಲೋಚನೆಗಳನ್ನು ಪ್ರಚೋದಿಸುವ ಈ ವಿಚಾರಗಳನ್ನ ನನ್ನ ಪುಸ್ತಕದ ಪ್ರಮುಖ ಪದ್ಯದಲ್ಲಿ ತರಲು ಪ್ರಯತ್ನಿಸಿದ್ದೇನೆ.

◆ **ನಾಟಕ ರಚನೆ ನಿಮ್ಮ ಇನ್ನೊಂದು ಆಸಕ್ತಿಯ ಕ್ಷೇತ್ರ. The Shadow 'ಬಹುಪತ್ನಿತ್ವ' ಪದ್ಧತಿಯನ್ನು ಪ್ರಶ್ನಿಸುವ ನಾಟಕ, ಮೇಲ್ನೋಟಕ್ಕೆ ಒಂದೇ ರೀತಿ ಕಾಣುವ ವಿವಾಹಿತ ಮಹಿಳೆಯರ ಕಥೆ. ನನ್ನ ಪ್ರಶ್ನೆ ಇವತ್ತಿನ ಕಾಲದಲ್ಲಿ 'ರಂಗಭೂಮಿ' ನಿಮಗೆ ಯಾಕೆ ಮುಖ್ಯ ಅನಿಸಿತು?**

ಯಾಕೆಂದರೆ ಇರಾನಿನ ಮಹಿಳಾ ಬರಹಗಾರರು ಹೆಚ್ಚಾಗಿ ಇದನ್ನು ಬಳಕೆ ಮಾಡಿಲ್ಲ. ಮತ್ತೆ ನಾನು, ಪುರುಷ ಪ್ರಧಾನ ಸಮಾಜಕ್ಕೆ ತಮ್ಮನ್ನು ಒಗ್ಗಿಸಿಕೊಳ್ಳಲು ಪ್ರಯತ್ನಿಸುತ್ತಾ ಅವರ ಕ್ಲೀಷೆಗಳನ್ನು ನಿರ್ವಹಿಸುತ್ತಿರುವ ಐಡೆಂಟಿಟಿ ಕ್ರೈಸಿಸ್ ಇರುವ ಎರಡು ಮಹಿಳಾ ಧ್ವನಿಗಳನ್ನು ವೇದಿಕೆಗೆ ತಂದಿದ್ದೇನೆ. ವಿಶ್ವವಿದ್ಯಾನಿಲಯದಲ್ಲಿ ನನ್ನ ಪ್ರಮುಖ ಅಧ್ಯಯನ ಕ್ಷೇತ್ರವು ಅಸಂಗತ ರಂಗಭೂಮಿ (Theater of Absurd), ಮತ್ತು ಹೆರಾಲ್ಡ್ ಪಿಂಟರ್‌ನ ನಾಟಕಗಳು. ಕಾಮೆಡಿ ಆಫ್ ಮೆನಾಸ್‌ನ (Comedy of Menace) ಶೈಲಿಯನ್ನು ಹಿಡಿಯುವುದೆಂದರೆ ನೀವು ಇಷ್ಟಪಡದ ಪರಿಸ್ಥಿತಿಯ